ನನ್ನತ್ತ ಸುಳಿಯುತ್ತಿರಲಿಲ್ಲ ಎಂದುಕೊಂಡ ಕೊನೇರಿ ತಾನು ಇಂದೇಕೋ ತೀವ್ರವಾಗಿ ಯೋಚಿಸುತ್ತಿದ್ದೇನಲ್ಲ ಎನಿಸಿತು. ವಿನಃ ಕಾರಣ ಅವಕಾಶ ಕಳೆದುಕೊಂಡೆ ಎಂದುಕೊಳ್ಳುತ್ತ ಕೈಕೈ ಹಿಸುಕಿಕೊಂಡ.

ಗೇನಿಸುತ್ತಲೆ ಕೊನೇರಿ ಅಲ್ಲಿಂದ ಶಿಬಿರದೊಳಕ್ಕೆ ಹೋಗಿ ಮಲಗಿದ. ಘಳಿಗೆಯ ನಂತರ ಮಗ್ಗಲು ಬದಲಿಸಿ ಆಕಳಿಸುತ್ತ ಎದುರುಗಡೆ ನೋಡಿದ. ಎಲ್ಲಿಂದ ಬಂದಿತೇನೋ ಶಿಬಿರದ ಒಳಗೋಡೆಯ ಬಿರುಕಲಿನಿಂದ ಮುಖ ಚಾಚಿದ ಹಾವು ಗೋಡೆಗಂಟಿದ್ದ ಹಲ್ಲಿಯನ್ನು ಬಾಯ್ಗೆಳೆದುಕೊಳ್ಳಲು ಹೊಂಚು ಹಾಕುತ್ತಿತ್ತು. ಅದನ್ನು ಕಂಡೊಡನೆ ಹೌಹಾರಿದ ಕೊನೇರಿ ಸಟ್ಟನೇ.. ಹಾಸಿಗೆಯಿಂದ ಮೇಲೆದ್ದು ಕುಳಿತ. ಅವನ ಸದ್ದಿಗೆ ಹೆದರಿದ ಹಾವು ಚಾಚಿದ್ದ ಮುಖವನ್ನು ಸಟಕ್ಕನೇ ಹಿಂದಕ್ಕೆಳೆದುಕೊಂಡು ಸರಸರನೆ ಸರಿದು ಹೆಂಚಿನ ತೂತೊಂದಕ್ಕೆ ನುಗ್ಗಿ ಹೊರಹೋಯ್ತು. ಹಾವಿನಿಂದ ತಪ್ಪಿಸಿಕೊಳ್ಳುವ ಭರದಲ್ಲಿ ನೆಲಕ್ಕೆ ಜಾರಿಬಿದ್ದ ಹಲ್ಲಿ ಒದ್ದಾಡಿ ಪುನಃ ಮೇಲೆದ್ದು ತೆವಳುತ್ತ ಓಡಿಹೋಯ್ತು. ಅದನ್ನೇ ತದೇಕಚಿತ್ತದಿಂದ ದಿಟ್ಟಿಸುತ್ತಿದ್ದ ಇವನಿಗೆ ಹಲ್ಲಿಯನ್ನು ಕಾಪಾಡಿದ ಹೆಮ್ಮೆ. ಮರುಕ್ಷಣವೇ ಓಡಿಹೋದ ಹಾವು ನೆನಪಾಗಿ. 'ಥತ್ ನಾನೆಂತ ಮಾಡಿದೆ ಹಾವಿನ ಬೇಟೆ ತಪ್ಪಿಸಿ ಅದರ ಅನ್ನ ಅದರ ಬಾಯಿಗೆ ಬೀಳದಂತಾಯ್ತು. ಅದು ತಪ್ಪಲ್ಲ; ಆದರೂ ತಪ್ಪು ನಡೆದೇಹೋಯ್ತು ನನ್ನಿಂದ' ಹೀಗೆ ಯೋಚಿಸುತ್ತ ಕಳವಳಗೊಂಡ ಕೊನೇರಿಗೆ ಮತ್ತೊಂದು ಉದ್ವಿಗ್ನಗೊಳಿಸುವ ವಿಚಾರ ತಲೆಗೆ ಬಂತು.

ರಾವ್ ಸಾಹೇಬನು ನನಗೆ ಮಾಡುತ್ತಿದ್ದುದು ಅದೇ ಅಲ್ಲವೇ? ನನ್ನ ಪಾಲಿನ ಅನ್ನಕ್ಕೆ ಮಣ್ಣೆರಚುತ್ತಿರೋದು ಎಂದವನಿಗೆ 'ಫಾರೆಸ್ಟ್ ಸಾಹೇಬ' ನೆನಪಾದ. ಅವನ ದಾರ್ಷ್ಟ್ಯ, ವಂಚನೆ, ಧನದಾಹ, ಬೈಗುಳಗಳು ಕಣ್ಮುಂದೆ ಬಂದು ಇದ್ದಕ್ಕಿದ್ದಂತೆ ಕೊನೇರಿಯ ಕಣ್ಣು ಕೆಂಪಾದವು.

ಹಿಂದಿನ ದಿನದ ಮಧ್ಯಾಹ್ನ ನಡೆದ ಘಟನೆ. ಕೊನೇರಿಯೊಂದಿಗೆ ಪ್ಲಾಂಟೇಷನ್ ಕಾವಲಿಗಿದ್ದ ನಾಯಿ 'ಕರಿಯ' ಕಿರುಬನ ಬಾಯ್ಗೆ ತುತ್ತಾಗಿತ್ತು. ಶಿಬಿರದ ಅಂಗಳಕ್ಕೆ ಬಂದ ಕಿರುಬ ಕರಿಯನ ಕುತ್ತಿಗೆಗೆ ಬಾಯಿಹಾಕಿದೊಡನೆ ಅದು ಜೋರಾಗಿ ಅರಚಿತು. ಇಪ್ಪತ್ತಡಿಯಷ್ಟು ದೂರದಲ್ಲಿದ್ದ ಕೊನೇರಿ ಜೋರಾಗಿ ಶಬ್ದ ಮಾಡುತ್ತ ಮೇಲೆದ್ದು ಬರುವುದರೊಳಗಾಗಿ ಕಿರುಬ 'ಕರಿಯ'ನನ್ನು ಕಚ್ಚಿಕೊಂಡು ತಂತಿಬೇಲಿ ದಾಟಿ ಪಾರಾಯ್ತು. ಕೊನೇರಿ ಬೇಲಿದಾಟಿ ಅದನ್ನು ಬೆನ್ನಟ್ಟಿದರೂ ಪ್ರಯೋಜನವಾಗಲಿಲ್ಲ. ಕಡೆಗೆ ಸಿಕ್ಕಿದ್ದು ಕರಿಯನ ಅರೆಬರೆ ಉಳಿದ ಕಳೇಬರ. ಇದರಿಂದಾಗಿ ಕೆಂಡಮಂಡಲನಾದ ರಾವ್ ಸಾಹೇಬ ಕೊನೇರಿಯನ್ನು ತರಾಟೆಗೆ ತೆಗೆದುಕೊಂಡು ಒಂದು ತಿಂಗಳ ಸಂಬಳವನ್ನು ಕಟ್ ಮಾಡುವುದಾಗಿ ಹೇಳಿದ್ದ. ಕೊನೇರಿ ಎಷ್ಟು ಗೋಗರೆದರೂ ಆ ಸಾಹೇಬ ತನ್ನ ಪಟ್ಟು ಸಡಿಲಿಸಲಿಲ್ಲ. ಅವನಿಂದ ದಕ್ಕಿದ್ದು ಮಾತ್ರ ಬೈಗುಳಗಳೇ.

ಅಲ್ಲದೇ ಕೊಡುವ ತಿಂಗಳ ಸಂಬಳದ ದುಡ್ಡಿನಲ್ಲೇ ಏನೇನೋ ಕತೆ ಹೇಳಿ ಸಾಹೇಬ ಅರ್ಧ ದುಡ್ಡನ್ನು ತನ್ನ ಜೇಬಿಗೆ ಇಳಿಸಿಕೊಳ್ಳುತ್ತಿದ್ದಾನೆ. ಸಾಲದ್ದಕ್ಕೆ ವರ್ಗಾವಣೆಗೊಂಡು ಬೇರೆಕಡೆ ಹೋಗುವವನು ಈ ಹಿಂದಿನ ತನ್ನ ಎರಡು ತಿಂಗಳ ಬಾಕಿ ಸಂಬಳವನ್ನು ಎಗರಿಸಿಕೊಂಡೇ ಹೋಗಲು ನೆಪ ಹುಡುಕುತ್ತಿದ್ದಾನೆ ಎಂಬ ವಿಷಯ ಹೇಗೋ ತಿಳಿದಿದ್ದ ಕೊನೇರಿಗೆ ಮತ್ತಷ್ಟೂ ಕೋಪವುಕ್ಕಿತು. 'ಹೀಗಾದರೆ ನನ್ನಂಥವರು ಜೀವನ ಮಾಡೋದಾದ್ರೂ ಹೇಗೆ..? ನರಿ ಬುದ್ಧಿಯವನು ಹಾಳಾಗಿ ಹೋಗಲಿ' ಎಂದು ಅಂಗೈಗಳೆರಡನ್ನು ಹೊಸೆಯುತ್ತ ಸಾಹೇಬನಿಗೆ ಶಾಪ ಹಾಕಿದ್ದ. ಈಗ ಅದೇ ವಿಚಾರ ತಲೆಗೆ ಬಂದು ಕೊನೇರಿ ತಳಮಳಗೊಂಡ. ಮುಖ ಸಣ್ಣಗೆ ಮಾಡಿಕೊಂಡು ಕುಳಿತಲ್ಲಿಂದಲೇ ನೆಲ ದಿಟ್ಟಿಸತೊಡಗಿದ.

ತನ್ನ ಬದುಕು ಹೀಗೇಕಾಗುತ್ತಿದೆ, ತಾನು ಅಂದುಕೊಂಡದ್ದು ಏನೂ ನಡಿಯುತ್ತಿಲ್ಲವೆಂದು ಖಿನ್ನವದನನಾಗಿ ಹಾಸಿಗೆಯನ್ನು ಕೈಗೆತ್ತಿಕೊಂಡು ಮತ್ತೊಮ್ಮೆ ಜಾಡಿಸಿ ಹಾಸಿ ಮಲಗಲುನುವಾದ. ಹಿಂದಿನ ಕಹಿ ಘಟನೆಯು ಮರೆತುಹೋಯ್ತು ಎನ್ನುವಾಗಲೇ ಕೊನೇರಿಯ ಮನಸ್ಸಿನ ಅದಾವ ಮುದುರಿನಲ್ಲಿತ್ತೋ ಹೆಂಡತಿಯ ನೆನಪು ಈಗ ಹಾಸಿಗೆ ಮುದುರಿನಿಂದಲೇ ಹೊರಬಿದ್ದಂತೆ ಅವನ ಮನಸ್ಸಿಗೆ ನುಗ್ಗಿ ಬಂತು.

ಕೊನೇರಿ ಇಷ್ಟಪಟ್ಟು ಗೌರಿಯನ್ನು ಕಟ್ಟಿಕೊಂಡದ್ದು ಅವನ ಬಾಳಿಗೆ ಬೆಳಕಾದಂತಹ ಭಾವ. ಅವಳ ಸಾಂಗತ್ಯದಿಂದ ಬಣ್ಣಮಾಸಿದ ಅವನ ಬದುಕಿಗೊಂದು ರಂಗು ಬಂದಿತ್ತು. ತನ್ನ ಭಾವನೆಗಳನ್ನು, ಕಷ್ಟ-ಸುಖಗಳನ್ನು ಹಂಚಿಕೊಳ್ಳಲು ತನ್ನದೂ ಎನ್ನುವ ಒಂದು ಜೀವವಾದರೂ ಸಿಕ್ಕಿತಲ್ಲ. ಇನ್ನೂ ತನ್ನ ಒಂಟಿ